ಅನುದಾನ ಕೊರತೆ ಇದ್ದ ಕಾರಣಕ್ಕೆ ಮಾತ್ರ ಅರ್ಜಿಗಳು ಬಾಕಿ ಉಳಿದಿವೆ.

ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಮಂಡ್ಯ, ಯಾದಗಿರಿ, ಕೊಡಗು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.

ಧಾರವಾಡ, ಬಳ್ಳಾರಿ, ಕೋಲಾರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಗದಗ, ಬೆಂಗಳೂರು (ನ), ಉತ್ತರ ಕನ್ನಡ, ಮೈಸೂರು, ತುಮಕೂರು, ಹಾಸನ, ಹಾವೇರಿ, ರಾಯಚೂರು, ಕೊಪ್ಪಳ, ರಾಮನಗರ, ಬಾಗಲಕೋಟೆ, ಬೆಂಗಳೂರು (ಗ್ರಾ), ದಾವಣಗೆರೆ, ಚಾಮರಾಜನಗರ, ಚಿತ್ರದುರ್ಗ, ವಿಜಯಪುರ, ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಆರ್ಥಿಕ ಗುರಿ ಮೀರಿ ಅರ್ಜಿ ಸ್ವೀಕೃತವಾಗಿದ್ದು, ಅಗತ್ಯ ಮೊತ್ತದ ಅನುದಾನದ ಲಭ್ಯವಿಲ್ಲದ ಕಾರಣ ಬಾಕಿ ಉಳಿದಿರುತ್ತವೆ.

ನಿರಂತರ ಜ್ಯೋತಿ ಯೋಜನೆ

5363 (4258); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿರಂತರ ಜ್ಯೋತಿ ಯೋಜನೆ ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಅನುಷ್ಠಾನ ಮಾಡಲು ಸರ್ಕಾರವು ನಿಗಧಿ ಮಾಡಿದ ಕಾಲ ಮಿತಿ ಎಷ್ಟು;

ಶ್ರೀ ಡಿ. ಕೆ. ಶಿವಕುಮಾರ (ಇಂಧನ ಸಚಿವರು)

ಅ) ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವತಿಯಿಂದ ನಿರಂತರ ಜ್ಯೋತಿ ಯೋಜನೆಯ ಹಂತ–1 ರಡಿ 18 ಫೀಡರ್‌ಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ಈಗಾಗಲೇ ಚಾಲನೆಗೊಳಿಸಲಾಗಿರುತ್ತದೆ.

ನಿರಂತರ ಜ್ಯೋತಿ ಯೋಜನೆ ಹಂತ–3 ರಡಿಯಲ್ಲಿ ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 9 ಫೀಡರ್‌ಗಳ (ಬ್ರಹ್ಮಸಂದ್ರ, ಕಾವಣದಾಳ, ತಿಮ್ಮಲಾಪುರ, ಗಿರಿಯಮ್ಮನಪಾಳ್ಯ, ಜಡೇಗೊಂಡನ ಹಳ್ಳಿ, ಗಂಜಲಗುಂಟೆ, ದೊಡ್ಡದಾಳವಾಟ, ಕಸಿನಾಯಕನಹಳ್ಳಿ ಮತ್ತು ಹುಣಸೆವಾಡಿ) ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಸಿಲಾಗಿದೆ.

ಆ) ನಿರಂತರ ಜ್ಯೋತಿ ಯೋಜನೆ ಹಂತ–3ರಲ್ಲಿ, 9 ಫೀಡರ್‌ಗಳ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಿಕೊಟ್ಟ ದಿನಾಂಕದಿಂದ 15 ತಿಂಗಳ ಕಾಲಮಿತಿ ನಿಗದಿಪಡಿಸಲಾಗಿದೆ.

ವಿವಿಧ ಯೋಜನೆಗಳು

5364 (4981); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

ಅ) ಬೆಳಗಾವಿ ಜಿಲ್ಲೆ ಅಥಣಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪುರಸಭೆಗೆ 2012–13, 2013–14 ಹಾಗೂ 2014–15ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು;

ಆ) ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ಯೋಜನೆವಾರು, ವಾರ್ಡುಗಳವಾರು, ವರ್ಷವಾರು ಹಾಗೂ ಕಾಮಗಾರಿಗಳವಾರು ವಿವರ ನೀಡುವುದು);

ಇ) ಅಥಣಿ ವಿಧಾನಸಭಾ ಕ್ಷೇತ್ರದ ಪುರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸದರಿ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮವೇನು;